# ಬನ್ನಿ ನಮ್ಮ ಕುಮಟಾ ನಗರವನ್ನು ಕಸ ಮುಕ್ತವಾಗಿಸಲು ಕೈಜೋಡಿಸಿ

ಖುಷಿ ಪರಿಸರ
KHUSHI PARISARA

## ಸ್ಪಾರ್ಕ್ ತಂಡ

## SPARK TEAM

## for zero waste KUMTA PROJECT

**ತ್ಯಾಜ್ಯ ನಿರ್ವಹಣೆಯಲ್ಲಿ ನಮ್ಮ ಕರ್ತವ್ಯ ಹಾಗೂ ಹಕ್ಕುಗಳನ್ನು ಅರಿತುಕೊಳ್ಳೋಣ**

**ತ್ಯಾಜ್ಯ ಮುಕ್ತ ಕುಮಟಾ ನಮ್ಮೆಲ್ಲರ ಗುರಿ ನಾವೇನು ಮಾಡಬಹುದು?**

1. ಮೊದಲನೆಯ ಹೆಜ್ಜೆಯಾಗಿ ಕಸವನ್ನು ಮನೆಯಲ್ಲೆ ವಿಂಗಡಿಸಿ
2. ಅಡುಗೆ ಮನೆಯ ತ್ಯಾಜ್ಯದಿಂದ ಗೊಬ್ಬರ ತಯಾರಿಸಿ ಅಥವಾ ಜೈವಿಕ ಅನಿಲ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳಿ
3. ಈ ಮಾಹಿತಿಯನ್ನು ಕುಮಟಾದೆಲ್ಲೆಡೆ ಪ್ರಸಾರ ಮಾಡಲು ಸ್ಪಾರ್ಕಟೀಮಿನ ಸದಸ್ಯರಾಗಿ ಖುಷಿ ಪರಿಸರ, ಸ್ವಚ್ಛ ಪರಿಸರವನ್ನು ಪೋಷಿಸುವ ಮೂಲಕ ಜನಜೀವನದಲ್ಲಿ ನೆಮ್ಮದಿ ಹಾಗೂ ಸೌಖ್ಯವನ್ನು ತರಲು ಪರಿಶ್ರಮಿಸುತ್ತಿರುವ ಒಂದು ಸರ್ಕಾರೇತರ ಸಂಸ್ಥೆ ಸ್ಪಾರ್ಕಟೀಮ್, ಕುಮಟಾ ಪರಿಸರ ಸ್ನೇಹಿಗಳ ಒಂದು ಸಂಘ.

## ತ್ಯಾಜ್ಯ ಉತ್ಪಾದಕರ ಕರ್ತವ್ಯಗಳು

1. ಎ) ತ್ಯಾಜ್ಯಗಳನ್ನು ಸಂಗ್ರಹಿಸುವಾಗ ಬೇರೆ ಬೇರೆ ವಿಂಗಡಿಸಿ ಮೂರು ಪ್ರತ್ಯೇಕ ಡಬ್ಬಿಗಳಲ್ಲಿ ಸಂಗ್ರಹಿಸತಕ್ಕದ್ದು. (ಅವುಗಳನ್ನು ಜೈವಿಕ, ಅಜೈವಿಕ, ಹಾಗೂ ಅಪಾಯಕಾರಿ ಎಂದು ವಿಂಗಡಿಸಿ ತ್ಯಾಜ್ಯ ಸಂಗ್ರಾಹಕರಿಗೆ ಅದನ್ನು ಹಸ್ತಾಂತರಿಸತಕ್ಕದ್ದು)

ಬಿ) ಕಟ್ಟಡ ನಿರ್ಮಾಣ ಹಾಗೂ ನೆಲ ಸಮಗೊಳಿಸುವ ಸಂದರ್ಭದಲ್ಲಿ ಉತ್ಪಾದನೆಯಾಗುವ ತ್ಯಾಜ್ಯಗಳನ್ನು ಅವರದೇ ಸ್ವಂತ ಸ್ಥಳದಲ್ಲಿ ಅದನ್ನು ವಿಲೇವಾರಿ ಮಾಡತಕ್ಕದ್ದು.

ಸಿ) ತೋಟಗಾರಿಕೆ ತ್ಯಾಜ್ಯಗಳನ್ನು ಸ್ವಂತ ಸ್ಥಳಗಳಲ್ಲಿ ವಿಲೇವಾರಿ ಮಾಡತಕ್ಕದ್ದು

2. ಘನತ್ಯಾಜ್ಯಗಳನ್ನು ಬೀದಿಬದಿಯಲ್ಲಿ ಎಸೆಯತಕ್ಕದ್ದಲ್ಲ, ಸುಟ್ಟು ಹಾಕತಕ್ಕದ್ದಲ್ಲ ಹಾಗೂ ಹುಗಿಯತಕ್ಕದ್ದಲ್ಲ.

- ಪ್ಲಾಸ್ಟಿಕ್ ಕಸವನ್ನು ಬಿಸಾಕಬೇಡಿ
- ಕಸದ ಉತ್ಪಾದನೆಯುನ್ನು ಕಡಿಮೆಗೊಳಿಸಿ
- ಸಾಧ್ಯವಾದಷ್ಟು ವಸ್ತುಗಳನ್ನು ಮರುಬಳಸಿ
- ಅಡುಗೆಮನೆ ತ್ಯಾಜ್ಯದಿಂದ ಜೈವಿಕ ಗೊಬ್ಬರ ಅಥವ ಜೈವಿಕ ಅನಿಲ ತಯಾರಿಸಿ
- ಪ್ಲಾಸ್ಟಿಕ್ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಗುಜರಿಯವರಿಗೆಕೊಡಿ.

3. ತ್ಯಾಜ್ಯ ಉತ್ಪಾದಕರು ಘನತ್ಯಾಜ್ಯ ನಿರ್ವಹಣೆಗೆ ನಿಗದಿತ ಶುಲ್ಕವನ್ನು ಸ್ಥಳೀಯ ಸಂಸ್ಥೆಗಳ ನಿಯಮಾವಳಿಗನುಗುಣವಾಗಿ ಭರಿಸತಕ್ಕದ್ದು.

4. ಬೀದಿ ಬದಿಯ ವ್ಯಾಪಾರಿಗಳು ತಮ್ಮ ಚಟುವಟಿಕೆಯಿಂದ ಉತ್ಪಾದನೆಯಾಗುವ ಘನತ್ಯಾಜ್ಯ ಸಂಗ್ರಹಣೆಗೆ ಪ್ರತ್ಯೇಕ ಡಬ್ಬಿಗಳನ್ನು ಇಟ್ಟುಕೊಳ್ಳತಕ್ಕದ್ದು.

5. ಎಲ್ಲಾ ಹೊಟೆಲ್‌ಗಳು ಹಾಗೂ ರೆಸ್ಟೋರೆಂಟಗಳ ತ್ಯಾಜ್ಯಗಳನ್ನು ಬೇರ್ಪಡಿಸಿ ಅವುಗಳನ್ನು ತ್ಯಾಜ್ಯ ಸಂಗ್ರಾಹಕರಿಗೆ ನೀಡತಕ್ಕದ್ದು ಹಾಗೂ ಜೈವಿಕವಾಗಿ ಲೀನವಾಗಬಹುದಾದ ತ್ಯಾಜ್ಯಗಳನ್ನು ಗೊಬ್ಬರ ಅಥವ ಜೈವಿಕ ಅನಿಲವಾಗಿ ಪರಿವರ್ತಿಸುವುದು.

## ಸ್ಥಳೀಯ ಪ್ರಾಧಿಕಾರ ಹಾಗೂ ಪಂಚಾಯತಗಳ ಕರ್ತವ್ಯಗಳು

1. ಘನತ್ಯಾಜ್ಯ ನಿರ್ವಹಣೆ ಕುರಿತು ಯೋಜನೆಗಳನ್ನು ರೂಪಿಸತಕ್ಕದ್ದು ಹಾಗೂ ತ್ಯಾಜ್ಯ ವಿಂಗಡನೆ, ಸಂಗ್ರಹ, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು.

- ಬೇರ್ಪಡಿಸಲ್ಪಟ್ಟ ತ್ಯಾಜ್ಯಗಳನ್ನು ಪ್ರತಿಯೊಂದು ಮನೆಯಿಂದ ಸಂಗ್ರಹಿಸುವ ವ್ಯವಸ್ಥೆ ಕಲ್ಪಿಸತಕ್ಕದ್ದು.
- ತ್ಯಾಜ್ಯ ಸಂಗ್ರಾಹಕರರನ್ನು ಗುರುತಿಸಿ ಅವರನ್ನು ಘನತ್ಯಾಜ್ಯ ನಿರ್ವಹಣೆಯಲ್ಲಿ ಬಳಸಿಕೊಳ್ಳಬೇಕು.
- ಈ ನಿಯಮಾವಳಿಗಳನ್ನು ಪಾಲಿಸಲು ಬೈಲಾಗಳನ್ನು ರಚಿಸತಕ್ಕದ್ದು.
- ತ್ಯಾಜ್ಯಗಳನ್ನು ಉತ್ಪಾದಿಸುವವರಿಂದ ನಿಗದಿತ ಶುಲ್ಕವನ್ನು ವಸೂಲಿ ಕ್ರಮ ಕೈಗೊಳ್ಳತಕ್ಕದ್ದು.
- ಘನತ್ಯಾಜ್ಯ ಉತ್ಪಾದಕರಿಗೆ ಅವುಗಳನ್ನು ಎಸೆಯದಂತೆ ನಿರ್ಭಂಧಿಸತಕ್ಕದ್ದು. ಅವುಗಳನ್ನು ವಿಂಗಡಿಸಿ ನಂತರ ತ್ಯಾಜ್ಯ ಸಂಗ್ರಾಹಕರಿಗೆ ಹಸ್ತಾಂತರಿಸುವಂತೆ ಸೂಚಿಸುವುದು.

• ಘನತ್ಯಾಜ್ಯ ಸಂಗ್ರಹಣ ಘಟಕಗಳನ್ನು ಸ್ಥಾಪಿಸತಕ್ಕದ್ದು. ಹಾಗೂ ಹಸಿರು (ಜೈವಿಕ ತ್ಯಾಜ್ಯಗಳಿಗೆ), ಬಿಳಿ (ಮರುಬಳಕೆಯಾಗುವ ತ್ಯಾಜ್ಯಗಳಿಗೆ) ಹಾಗು ಕಪ್ಪು (ಇತರೆ ತ್ಯಾಜ್ಯಗಳಿಗೆ) ಡಬ್ಬಗಳನ್ನು ಬಳಸತಕ್ಕದ್ದು

• ಮರು ಉತ್ಪಾದನೆಗೆ ಬಳಸಬಹುದಾದ ಪ್ಲಾಸ್ಟಿಕ್ ತ್ಯಾಜ್ಯವನ್ನು ಸೂಕ್ತ ಘಟಕ ಅಥವಾ ಸಂಗ್ರಹಕಾರರಿಗೆರವಾನಿಸುವುದು

• ಪ್ಲಾಸ್ಟಿಕ್ ತ್ಯಾಜ್ಯವನ್ನು ಸಾರ್ವಜನಿಕ ಸ್ಥಳಗಳಲ್ಲಿ ಸುಡದಂತೆ ನೋಡಿಕೊಳ್ಳುವುದು.

• ಪ್ಲಾಸ್ಟಿಕ್ ಉತ್ಪಾದಕರ ಸಹಾಯದೊಂದಿಗೆ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸುವುದು (ಮಾರ್ಚ್ 2017ರೊಳಗೆ)

• ಮನೆಗಳಲ್ಲಿ ಉತ್ಪಾದನೆಯಾಗುವ ಅಪಾಯಕಾರಿ ತ್ಯಾಜ್ಯಗಳನ್ನು ಸಂಗ್ರಹಿಸಲು ಪ್ರತಿ 20 ಚದುರ ಕಿ.ಮಿ.ಗೆ ಒಂದರಂತೆ ಸಂಗ್ರಹಣಾ ಘಟಕವನ್ನು ಸ್ಥಾಪಿಸುವುದು. ಹಾಗು ಜನರಿಗೆ ಅಪಾಯಕಾರಿ ತ್ಯಾಜ್ಯಗಳನ್ನು ಅಲ್ಲಿಯೇ ಹಾಕಲು ಸೂಚಿಸುವುದು.

• ಅಪಾಯಕಾರಿ ತ್ಯಾಜ್ಯಗಳನ್ನು ಸಂಗ್ರಹಿಸಲು ಹಾಗು ಸಾಗಣೆ ಮಾಡಲು ಸಂಗ್ರಹಣಾ ಘಟಕದಲ್ಲಿ ಸಾಕಷ್ಟು ಸುರಕ್ಷಣಾ ವ್ಯವಸ್ಥೆಯನ್ನು ಕಲ್ಪಿಸುವುದು

• ಬೀದಿ ಗುಡಿಸುವುದರಿಂದ ಸಂಗ್ರಹವಾದ ಘನತ್ಯಾಜ್ಯಗಳನ್ನು ಸುಡದಂತೆ ಪೌರಕಾರ್ಮಿಕರಿಗೆ ನಿರ್ದೇಶನ ನೀಡತಕ್ಕದ್ದು.

• ಮನೆಮನೆಯಿಂದ ತ್ಯಾಜ್ಯ ಸಂಗ್ರಹಣೆಯನ್ನು ಮನೆಗಳಲ್ಲಿ ವಿಂಗಡಿಸಿದಂತೆ ಪ್ರತ್ಯೇಕವಾಗೇ ಸಂಗ್ರಹಿಸಿ, ಸಾಗಾಣಿಕೆ ಮಾಡುವಂತೆ ಪೌರಕಾರ್ಮಿಕರಿಗೆ ತರಬೇತುಗೊಳಿಸುವುದು.

• ಗುಜರಿ ಆಯುವವರು ಹಾಗು ಪೌರಕಾರ್ಮಿಕರಿಗೆ ಸರಿಯಾದ ತರಬೇತಿ ನೀಡುವುದು

• ಮಾರುಕಟ್ಟೆಗಳಲ್ಲಿ ಗೊಬ್ಬರ ಅಥವಾ ಜೈವಿಕ ಅನಿಲ ವಿಕೇಂದ್ರೀಕೃತ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿ, ತರಕಾರಿ, ಹಣ್ಣು, ಹೂವು, ಮಾಂಸ, ಮೀನು, ಪೌಲ್ಟ್ರಿಗಳಿಂದ ಉತ್ಪಾದನೆಯಾಗುವ ಘನತ್ಯಾಜ್ಯಗಳನ್ನು ದಿನನಿತ್ಯ ಸಂಗ್ರಹಿಸಿ ಈ ಘಟಕಗಳಲ್ಲಿ ಪರಿವರ್ತಿಸುವ ಕ್ರಮ ಕೈಗೊಳ್ಳುವುದು

• ಬೀದಿ ಗುಡಿಸುವುದರಿಂದ ಉತ್ಪಾದನೆಯಾಗುವ ಘನತ್ಯಾಜ್ಯಗಳನ್ನು ಪ್ರತಿ ಬೀದಿಯಿಂದ ಸಂಗ್ರಹಿಸುವ ಕುರಿತು ದಿನಂಪ್ರತಿ ಅಥವಾ ದಿನಬಿಟ್ಟು ದಿನಕ್ಕೊಮ್ಮೆ ಸಂಗ್ರಹಿಸುವ ಕ್ರಮ ಕೈಗೊಳ್ಳತಕ್ಕದ್ದು.

• ಘನತ್ಯಾಜ್ಯಗಳನ್ನು ಮತ್ತು ಚರಂಡಿಗಳಿಂದ ಎತ್ತಿದ ಹೂಳನ್ನು ತಾತ್ಕಾಲಿಕವಾಗಿ ಸಂಗ್ರಹಿಸುವ ದಾಸ್ತಾನು ಪ್ರದೇಶಗಳನ್ನು ಮುಚ್ಚಿಡುವ ಕ್ರಮ ಕೈಗೊಳ್ಳತಕ್ಕದ್ದು.

• ತೋಟಗಾರಿಕೆ ಹಾಗೂ ಪಾರ್ಕ, ಗಾರ್ಡನ್‌ಗಳಿಂದ ಉತ್ಪಾದನೆಯಾಗುವ ಘನತ್ಯಾಜ್ಯಗಳನ್ನು ಅಲ್ಲಲ್ಲಿಯೇ ವಿಲೇವಾರಿ ಮಾಡಲು ಕ್ರಮ ಜರುಗಿಸತಕ್ಕದ್ದು.

• ಜೈವಿಕವಾಗಿ ಲೀನವಾಗಬಹುದಾದ ಘನತ್ಯಾಜ್ಯಗಳನ್ನು ಸ್ಥಳದಲ್ಲಿಯೇ ಸಂಸ್ಕರಿಸಲು ಆದ್ಯತೆ ನೀಡತಕ್ಕದ್ದು ಇಲ್ಲದಿದ್ದಲ್ಲಿ ಸಂಸ್ಕರಣಾ ಘಟಕಗಳಿಗೆ ಸಾಗಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

• ಜೈವಿಕವಾಗಿ ಲೀನವಾಗದ ಘನತ್ಯಾಜ್ಯಗಳನ್ನು, ಘನತ್ಯಾಜ್ಯ ಸಂಗ್ರಾಹಕರಿಗೆ ಹಸ್ತಾಂತರಿಸುವುದು.

• ಮರುಬಳಕೆಗೆ ಬಾರದ ಪ್ಲಾಸ್ಟಿಕ್ ಘನತ್ಯಾಜ್ಯಗಳನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಸೂಚನೆಯಂತೆ ಸಂಸ್ಕರಿಸಿ ವಿಲೇವಾರಿ ಮಾಡತಕ್ಕದ್ದು.

• ಕಟ್ಟಡ ನಿರ್ಮಾಣ ಹಾಗೂ ನೆಲಸಮಗೊಳಿಸುವ ಸಂದರ್ಭದಲ್ಲಿ ಉತ್ಪಾದನೆಯಾದ ಘನತ್ಯಾಜ್ಯಗಳನ್ನು, ಕಟ್ಟಡ ನಿರ್ಮಾಣ ಹಾಗೂ ನೆಲಸಮಗೊಳಿಸುವ ನಿಯಮಾವಳಿಗಳ ಅನುಸಾರ ವಿಲೇವಾರಿ ಮಾಡತಕ್ಕದ್ದು.

• ಜನ ಸಮೂದಾಯಗಳನ್ನು ತ್ಯಾಜ್ಯ ನಿರ್ವಹಣೆ ಹಾಗೂ ವಿಲೇವಾರಿಯ ಎಲ್ಲಾ ಹಂತಗಳಲ್ಲಿಯೂ ಭಾಗವಹಿಸಲು ಪ್ರೋತ್ಸಾಹಿಸಿ ಜೈವಿಕ ಗೊಬ್ಬರ ಹಾಗು ಬಯೋಗ್ಯಾಸ್ ಉತ್ಪಾದನೆ ಮಾಡುವಕುರಿತು ಜಾಗೃತಗೊಳಿಸತಕ್ಕದ್ದು.

• ರಾಸಾಯನಿಕ ಗೊಬ್ಬರಗಳ ಬದಲಿಗೆ ಜೈವಿಕ ಗೊಬ್ಬರಗಳನ್ನು ಬಳಸುವಂತೆ ಎಲ್ಲಾ ಪಾರ್ಕ, ಗಾರ್ಡನ್ ಮಾಲೀಕರಿಗೆ ತಿಳಿಸತಕ್ಕದ್ದು.

• ವಿಕೇಂದ್ರೀಕೃತ ಘನತ್ಯಾಜ್ಯ ಸಂಸ್ಕರಣಾ ಘಟಕಗಳ ಸ್ಥಾಪನೆಯ ಮೂಲಕ ತ್ಯಾಜ್ಯ ಸಾಗಣೆ ವೆಚ್ಚ ಹಾಗೂ ಪರಿಸರದ ಮೇಲಾಗುವ ಪರಿಣಾಮಗಳನ್ನು ಕಡಿಮೆಗುಳಿಸುವುದು.

• ವಾರ್ಷಿಕ ಬಡ್ಜೆಟ್‌ನಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಮೊದಲ ಆಧ್ಯತೆಕೊಡತಕ್ಕದ್ದು.

• ಘನ ತ್ಯಾಜ್ಯ ಸಂಗ್ರಹಣೆ ಸಂದರ್ಭದಲ್ಲಿ ಸೂಕ್ತ ರಕ್ಷಣಾ ಪರಿಕರಗಳನ್ನು ಧರಿಸುವ ಕುರಿತು ಸಂಗ್ರಹಕಾರರಿಗೆ ತರಬೇತಿ ನೀಡುವುದು.

• ಘನತ್ಯಾಜ್ಯ ಉತ್ಪಾದಕರಿಗೆ ಮಾಹಿತಿ ಶಿಕ್ಷಣ, ಹಾಗೂ ಜಾಗೃತಿ ಅಭಿಯಾನದ ಮುಖೇನ ಘನತ್ಯಾಜ್ಯಗಳೆಡೆಗೆ ಅವರ ಜವಾಬ್ದಾರಿಗಳ ಬಗ್ಗೆ ಜಾಗೃತಿಗೊಳಿಸುವುದು

ನೆಲಭರ್ತಿಗಳು (landfills)- ಘನತ್ಯಾಜ್ಯಗಳನ್ನು ಸಾಧ್ಯವಾದಷ್ಟು ಮರುಬಳಕೆ ಹಾಗೂ ಮರುಉತ್ಪಾದನೆಗೆ

• ಬಳಸುವುದರೊಂದಿಗೆ ಶೂನ್ಯತ್ಯಾಜ್ಯದ ಗುರಿಯನ್ನು ತಲುಪುವುದು. ಶೂನ್ಯತ್ಯಾಜ್ಯವನ್ನು ಸಾಧಿಸಲು :

1. ಮಿಶ್ರ ಘನತ್ಯಾಜ್ಯಗಳನ್ನು ಹೂತು ಹಾಕದಂತೆ ತಡೆಗಟ್ಟುವುದು.

2. ಮರುಬಳಕೆ ಹಾಗೂ ಮರು ಉತ್ಪಾದನೆಗೆ ಬಾರದ ಘನತ್ಯಾಜ್ಯಗಳನ್ನು, ಜೈವಿಕವಾಗಿ ನಾಶವಾಗದ, ಸಂಸ್ಕರಿಸಿದ ಘನತ್ಯಾಜ್ಯವನ್ನು ಮಾತ್ರ ನೆಲಭರ್ತಿಗಳಿಗೆ ಕಳಿಸತಕ್ಕದ್ದು. (ನೆಲಭರ್ತಿಗಳನ್ನು ಶೆಡ್ಯೂಲ್-1ರಲ್ಲಿ ಕೊಟ್ಟ ಸೂಚನೆಗಳಂತೆ ನಿರ್ಮಿಸುವುದು)

3. ಹಳೆಯ ಘನತ್ಯಾಜ್ಯ ಸಂಗ್ರಹಣಾ ಸ್ಥಳಗಳನ್ನು ಪರಿಶೀಲಿಸಿ ಜೈವಿಕ ಪರಿಹಾರೋಪಾಯಗಳನ್ನು ಸೂಚಿಸುವುದು, ಇಲ್ಲದಿದ್ದಲ್ಲಿ ಅವುಗಳನ್ನು ವೈಜ್ಞಾನಿಕವಾಗಿ ಸಂಪೂರ್ಣವಾಗಿ ಸ್ಥಿಗಿತಗೊಳಿಸುವುದು.

**ಸ್ಪಾರ್ಕ್ ತಂಡ**

/ khushiparisara@gmail.com